(SRI K. V. SHANKARA GOWDA)

(*c*) The proposal regarding the constitution of District Level School Committees are under the consideration of the Government. Since they are not yet constituted the question of their meeting once in three months does not arise.

ಶ್ರೀ ಡಿ, ಎಸ್. ನಾಡಕರ್ಣಿ.—(ಸಿ) ಪ್ರಶ್ನೆಗೆ ಉತ್ತರವಾಗಿ, ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಅದನ್ನು ಯಾವಾಗ ಮಾಡುತ್ತೀರಿ, ಸ್ವಾಮಿ ?

†ಶ್ರೀ ಕೆ. ವಿ. ಶಂಕರಗೌಡ.—ಇನ್ನು ಒಂದೆರಡು ತಿಂಗಳಿನಲ್ಲಿ ಘೋರಂ ಮಾಡುತ್ತೇವೆ.

Per capita income of Agricultural Labourers in Kolar and Srinivaspur Taluk

16. SRI B. L. NARAYANASWAMY (Srinivasapur).—

Will the Minister for Law, Labour and Parliamentary Affairs be pleased to state :—

(*a*) the average per capita income of the agricultural labourers in Kolar District in general and in Srinivasapur taluk in particular ;

(*b*) the cost of living index in the said places ?

SRI VEERENDRA PATIL (Chief Minister) [On behalf of SRI K. PUTTASWAMY (Minister for Law, Labour and Parliamentary Affairs)].—

(*a*) *Per capita* income cannot be estimated for different classes of population. Usually *per capita* income is computed either for the whole country or for the State. Therefore this information is not available.

(*b*) The cost of living index is computed only for certain important Industrial Centres. Consumer Price Index Number is being constructed by Labour Bureau, Simla for Kolar Gold Fields. The cost of Living Index No. for K.G.F. (base year 1960=100) was 173 for the month of December 1969.

SRI B. L. NARAYANASWAMY.- May I know whether information cannot be furnished at least on the basis of Agriculture Income Tax paid ?

SRI VEERENDRA PATIL.—The total income has to be divided. If we go to rural areas, the income differs from place to place.

SRI B. L. NARAYANASWAMY.—Are the Government aware of the per capita income ? Can the Government at least tell us the minimum wage paid in Kolar District though not the per capita income there ?

† Indicates that the remarks or speeches have not been revised by the member concerned.

ಶ್ರೀ ವೀರೇಂದ್ರ ಪಾಟೀಲ್.—ಮಿನಿಮಂ ವೇಜಸ್ ಎಲ್ಲಾ ಕಡೆಯೂ ಅಪ್ಲಿಕಬಲ್ ಮಾಡಿದ್ದೇವೆ. ಎಲ್ಲಾದರೂ ಕಂಪ್ಲೇಂಟ್ಸ್ ಬಂದರೆ ವಿಚಾರಮಾಡಿ ನೋಡಬಹುದು. ಈಗಾಗಲೇ ಮಿನಿಮಂ ವೇಜಸ್ ನಿಗದಿಯಾಗಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಮಿನಿಮಂ ವೇಜಸ್ ವಿಚಾರದಲ್ಲಿ ನನ್ನ ಕಂಪ್ಲೇಂಟ್ ಇಲ್ಲ ಸ್ವಾಮಿ. ಈಗ ಬರತಕ್ಕ ಕೂಲಿಯಿಂದ, ಈಗಿರತಕ್ಕ ಸ್ಥಿತಿಯಲ್ಲಿ ಜೀವನ ಮಾಡುವುದಕ್ಕೆ ದುರ್ಭರವಾಗಿದೆ ಎಂಬುದನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಈ ಪ್ರಶ್ನೆಯನ್ನು ಕೇಳುತ್ತಾ ಇದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ನ್ಯಾಷನರ್ ಇನ್‌ಕಮ್ಮೇ ಹೆಚ್ಚಾಗಿದೆ. ಯಾವುದಾದರೂ ಒಂದು ಹಳ್ಳಿ ಪ್ರಶ್ನೆ ಅಲ್ಲ, ಮತ್ತೊಂದು ಪ್ರಶ್ನೆ ಅಲ್ಲ. ನಮ್ಮ ನ್ಯಾಷನಲ್ ಇನ್‌ಕಂ ಕಡಿಮೆ ಇದೆ. ಇದು ಹೆಚ್ಚು ಮಾಡಲಾರದೆ ಪ್ರತಿಯೊಬ್ಬರ ಇನ್‌ಕಂ ಹೆಚ್ಚು ಮಾಡಲಿಕ್ಕೆ ಎಲ್ಲಿ ಆಗುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ಕೃಷಿ ಕಾರ್ಮಿಕರ ವೇತನ ಬೇರೆ ರಾಜ್ಯಗಳಲ್ಲಿ ತಗೆದುಕೊಂಡರೆ ಆದರಲ್ಲೂ ಕೇರಳ ಮತ್ತು ಇತರ ರಾಜ್ಯಗಳಲ್ಲಿ ಬಹಳ ಉತ್ತಮಗೊಂಡಿದೆ. ಮೈಸೂರು ರಾಜ್ಯದಲ್ಲಿ ಕೃಷಿ ಕಾರ್ಮಿಕರ ವೇತನ ಮತ್ತು ಇತರ ಪರಿಸ್ಥಿತಿಗಳು ಯಾವ ರೀತಿಯಿಂದಲೂ ಉತ್ತಮಗೊಳ್ಳದೆ ಇರುವುದರಿಂದ ತಾವು ಅಗ್ರಿಕರ್ಚರರ್ ವರ್ಕರ್ಸ್ ಬಗ್ಗೆ ನಮ್ಮ ರಾಜ್ಯದಲ್ಲಿ ಸರ್ವೆ ನಡೆಸಿ, ಅವರ ಪರಿಸ್ಥಿತಿ ಏನು ಅವರು ಹೇಗೆ ಇದ್ದಾರೆ ಎಂಬುದನ್ನು ಕಂಡುಹಿಡಿದು ಅವಕ್ಕೆ ಸೂಕ್ತವಾದ ಪರಿಹಾರವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಒಂದು ಸಲಹೆಯನ್ನು ಕೊಟ್ಟಿದ್ದಾರೆ ಸರ್ವೇ ಮಾಡಬೇಕೆಂದು ಹೇಳುತ್ತಾರೆ. ಮಿನಿಮಂ ವೇಜಸ್ ಫಿಕ್ಸ್ ಮಾಡಿದ್ದೇವೆ. ಇಷ್ಟೇ ಕೊಡಬೇಕು ಎಂದು ಇದೆ. ಎಲ್ಲಿ ಕಂಪ್ಲೇಂಟ್ಸ್ ಬರುತ್ತದೆ ಅಲ್ಲಿ ಇನ್‌ಸ್ಪೆಕ್ಟರು ಇರುತ್ತಾರೆ, ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ. ಕೆಲವು ಕಡೆ ಮಿನಿಮಂ ವೇಜಸ್‌ಗಿಂತಲೂ ಅನೇಕ ಪಟ್ಟು ಹೆಚ್ಚು ಕೊಡುತ್ತಾರೆ. ಕೆಲವು ಸಾರಿ ಇರಿಗೇಷನ್ ಏರಿಯಾದಲ್ಲಿ, ಪ್ಲಾಂಟೇಷನ್ ಏರಿಯಾದಲ್ಲಿ ದಿನಕ್ಕೆ 3-4 ರೂಪಾಯಿ ಕೊಟ್ಟರೂ ಆಳುಗಳು ಸಿಕ್ಕುವ ಹಾಗಿಲ್ಲ. ಅದು ರಿವೈಸ್ ಆಗಿದೆ. ಮಿನಿಮಂ ವೇಜಸ್ ಇಷ್ಟೇ ಇರಬೇಕು ಎಂದು ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಒಂದೂವರೆ ರೂಪಾಯಿ ಇತ್ತು, ಅದನ್ನು ಈಗ 4 ರೂಪಾಯಿ ಮಾಡಿದ್ದೀರಿ. ನನ್ನ ಪ್ರಶ್ನೆ ಅದಲ್ಲ, ಬೇರೆ ರಾಜ್ಯಗಳಲ್ಲಿ ಮಿನಿಮಂ ವೇಜಸ್ ಜಾಸ್ತಿ ಇರುವುದರಿಂದ ಇದನ್ನೆಲ್ಲಾ ಸರ್ವೇ ಮಾಡಿಸಿ ಅವರ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮೇ 10, 1968ರಲ್ಲಿ ಮಿನಿಮಂ ವೇಜಸ್ ರಿವೈಸ್ ಮಾಡಿದ್ದೇವೆ. ಮತ್ತೆ ಮಾಡುವಂತಹ ಅವಶ್ಯಕತೆ ಕಂಡಾಗ ಮತ್ತೆ ಹೆಚ್ಚು ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಕೈಗಾರಿಕೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ 12 ತಿಂಗಳೂ ಕೂಡ ವೇತನ ಸಿಕ್ಕುತ್ತದೆ ಎಂಬ ಭರವಸೆ ಇದೆ. ಅದೇ ರೀತಿ ಕೃಷಿ ಕಾರ್ಮಿಕರಿಗೂ ಕೂಡ ಮಿನಿಮಂ ವೇಜಸ್ 12 ತಿಂಗಳೂ ಸಿಕ್ಕುತ್ತದೆ ಎಂಬ ಭರವಸೆ ನೀಡಲು ಕ್ರಮ ತೆಗೆದುಕೊಳ್ಳುತ್ತೀರಾ? ಮತ್ತು ಕೈಗಾರಿಕಾ ಕಾರ್ಮಿಕರಿಗೆ ಕೊಡುವ ಸೌಲಭ್ಯವನ್ನು ಅವರಿಗೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು.—ಆ ಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ.

Sri C. K. RAJAIAH SHETTY.—Is it not necessary to conduct some sample survey to know how much is the per capita income of the rural people?

Sri VEERENDRA PATIL.—The suggestion is that we must have a random survey. It is a suggestion for action.

ಶ್ರೀ ಎಂ. ನಾಗಪ್ಪ.—ಈಗ ಇರತಕ್ಕ ಕನಿಷ್ಠ ವೇತನ ಸರಿಯಾಗಿ ಕಾರ್ಯ ರೂಪದಲ್ಲಿ ಇಲ್ಲ ಎನ್ನುವುದು ಸರ್ಕಾರದವರಿಗೆ ಗೊತ್ತಿದೆಯೇ ? ಹಾಗೆ ಗೊತ್ತಿದ್ದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬಹುದೇ ? ಈಗ ಲಿವಿಂಗ್ ಇಂಡೆಕ್ಸ್

(ಶ್ರೀ ಎಂ. ನಾಗಪ್ಪ)

ಹೆಚ್ಚಾದ ಕಾರಣ ಮತ್ತೆ ಮಿನಿಮಂ ವೇಜಸ್ ರಿವೈಸ್ ಮಾಡಿ 1970ಕ್ಕೆ ಹೊಸದಾಗಿ ನಿಗದಿ ಮಾಡಲಕ್ಕೆ ಪ್ರಯತ್ನ ಮಾಡುತ್ತೀರಾ ? ಅಥವಾ ಅದರ ಬಗ್ಗೆ ಯಾವುದಾದರೂ ಕಮಿಟಿ ಕಾನ್ಸ್ಟಿಟ್ಯೂಟ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಿನಿಮಂ ವೇಜಸ್ ಎಲ್ಲಾ ಕಡೆಯೂ ಸರಿಯಾಗಿ ಸಿಕ್ಕುತ್ತಿದೆಯೇ ಇಲ್ಲವೇ ಎಂಬುದನ್ನು ನೋಡುವುದಕ್ಕೆ ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಇನ್ಸ್ಪೆಕ್ಟರುಗಳು ಇದ್ದಾರೆ, ಅವರು ಅದನ್ನು ವಿಚಾರ ಮಾಡಿ ಒಂದು ವೇಳೆ ಸರಿಯಾಗಿ ಸಿಕ್ಕದೇ ಇದ್ದರೆ ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ವಿಚಾರಮಾಡುತ್ತಾರೆ. 1970ಕ್ಕೆ ಮಿನಿಮಂ ವೇಜಸ್ಸನ್ನು ರಿವೈಸ್ ಮಾಡಬೇಕೆಂದು ಹೇಳಿದ್ದಾರೆ. ಅವೇ ರೀತಿ ಮತ್ತೆ ಇನ್ನೂ ಒಬ್ಬಿಬ್ಬರು ಸದಸ್ಯರು ಹೇಳಿದ್ದಾರೆ.

ಶ್ರೀ ಎ. ಆರ್. ಬದರೀನಾರಾಯಣ್.—ಅಗ್ರಿಕಲ್ಚರಲ್ ಪ್ರಾಡ್ಯೂಸ್ ಪ್ರೈಸ್‌ಗೂ ಮತ್ತು ಅಗ್ರಿಕಲ್ಚರಲ್ ಲೇಬರ್ ವೇಜಸ್‌ಗೂ ಹೊಂದಿಸುವುದಕ್ಕೂ ಸರ್ಕಾರದವರು ಯಾವ ವ್ಯಯತ್ನ ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಅಗ್ರಿಕಲ್ಚರಲ್ ಪ್ರಾಡ್ಯೂಸ್ ಬಂಪರ್ ಕ್ರಾಪ್ ಬಂದರೆ ಪ್ರೈಸ್ ಭದ್ರ ಹೋಗುತ್ತದೆ, ಕಂಟ್ರೋಲ್ ಬಂದರೆ ಪ್ರೈಸ್ ಒಮ್ಮೆಗೆ ಏರುತ್ತದೆ. ಆದ್ದರಿಂದ ಪ್ರೈಸ್ ಲೈನ್, ಮಿನಿಮಂ ಪ್ರೈಸ್, ಸಪೋರ್ಟಿಂಗ್ ಪ್ರೈಸ್ ಅಂತ ಫಿಕ್ಸ್ ಮಾಡುತ್ತೇವೆ, ಮತ್ತು ಎಲ್ಲ ಬಹಳ ಹೆಚ್ಚು ಪ್ರೈಸ್ ಹಾರಿ ಹೋಗುತ್ತದೆ ಅಲ್ಲಿ ಕನ್ಸ್ಯೂಮರ್ ರೆಸ್ಪಾನ್ಸಿಬಲಿಟಿ ಬೇರೆ ಇರುತ್ತದೆ. ಅದಕ್ಕೆ ಇದೇ ರೀತಿ ಮಾಡುತ್ತೇವೆ ಎಂದು ಹೇಳಲಕ್ಕಾಗುವುದಿಲ್ಲ. ಸೀಸನರ್ ಕಂಡೀಷನ್ ಇರುತ್ತದೆ, ಕ್ರಾಪ್ ಕಂಡೀಷನ್ ಇರುತ್ತದೆ, ಮಾರ್ಕೆಟ್ ಕಂಡೀಷನ್ ಇರುತ್ತದೆ, ಇದನ್ನೆಲ್ಲಾ ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಬೋಳಾ ರಘುರಾಮ ಶೆಟ್ಟಿ. – ಕೃಷಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಮಾಡಲು ಅವರು ಬೆಳೆಯುತಕ್ಕ ಆಹಾರ ಧಾನ್ಯದ ಬೆಲೆಯನ್ನು ಹೆಚ್ಚು ಮಾಡಲಕ್ಕೆ ಸಾಧ್ಯವಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಆಹಾರಧಾನ್ಯದ ಬೆಲೆ ಹೆಚ್ಚು ಮಾಡಿದರೆ ಕನ್ಸ್ಯೂಮರ್ ಇದ್ದಾರೆ, ಅವರು ಹೆಚ್ಚು ಕೊಡುವುದಕ್ಕೆ ತಯಾರಾಗಿಲ್ಲ. ಫ್ರೀ ಮಾರ್ಕೆಟ್ ಇದ್ದರೆ, ಆ ಮಾತು ಬೇರೆ. ಅದು ಡಿಮ್ಯಾಂಡ್ ಅಂಡ್ ಸಪ್ಲೈ ಮೇಲೆ ಹೋಗುತ್ತದೆ. ಆದರೆ ಕೆಲವು ಕಡೆ ಇನ್ ಫಾರ್ಮರ್ ರೇಷನಿಂಗ್ ಮಾಡಿದ್ದೇವೆ, ಅಲ್ಲಿ ಆಹಾರಧಾನ್ಯ ಸಪ್ಲೈ ಮಾಡುವ ಜವಾಬ್ದಾರಿ ನಮ್ಮದು ಇದೆ. ಈಗ ಕನ್ಸ್ಯೂಮರ್ಸ್ ಒಂದು ರೂಪಾಯಿ ಹೆಚ್ಚು ಮಾಡಿದರೆ ಗಲಾಟೆ ಮಾಡುತ್ತಾರೆ, ಅದ್ದರಿಂದ ಹೆಚ್ಚು ಕೊಡುವುದಕ್ಕೆ ಆಗುವುದಿಲ್ಲ, ಈ ಎಲ್ಲಾ ಕಷ್ಟ ಇದೆ.

Copper Mining Project at Chitradurga

22. Sri C. K. RAJAIAH SHETTY (Chicknaikanahalli).—

Will the Minister for Industries, Information and Publicity be pleased to state :—

(*a*) the estimated cost of the Copper Mining Project of Chitradurga ;

(*b*) the expenditure incurred on the said Project so far ;

(*c*) the reasons for the delay in erecting the mining plant machinery at the Project ;

(*d*) whether copper deposits have been found anywhere else in the State in the recent exploration ?